ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.ಃ 1525/2022

..........................................................................

CW 03
PW 02

| | | |
|---|---|---|
| ಹೆಸರು | ಃ | ಬಸವರಾಜ ◌ೋಣಿ |
| ತಂದೆಯ ಹೆಸರು | ಃ | ಪಿಶಪ್ಪಾ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ರೈತಾಪಿ |
| ವಾಸಸ್ಥಳ | ಃ | ಮುಗದಕೊಪ್ಪಾ , ತಾಃ ಹಳಿಯಾಳ. |

ದಿನಾಂಕ 24-01-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 1, 2.4 ರಿಂದ 6, 8 ರಿಂದ 10 ಪರಿಚಯ ಇದ್ದಾರೆ ಉಳಿದವರ ಪರಿಚಯ ಇಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಘಟನಾ ಜಾಗದ ಪಂಚನಾಮೆ ಆಗಿದ್ದು, ಅದರಲ್ಲಿ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಘಟನಾ ಜಾಗದ ಪಂಚನಾಮೆಯನ್ನು ಈಗಾಗಲೇ **ನಿಪಿ 1 ಎಂದ .ಗುರುತಿಸಲಾಗಿದ್ದು ,** ಸಾಕ್ಷಿಯ ಸಹಿಯನ್ನು **ನಿಪಿ 1 ಬಿ ಎಂದು** ಗುರುತಿಸಲಾಯಿತು. ಸದರಿ ಸಹಿಯನ್ನು 2022 ರಲ್ಲಿ ಚಾಸಾ 1 ರವರ ಮನೆ ಮುಂದೆ Splender ಮೋಟಾರ ಸೈಕಲ್ ಕಳ್ಳತನವಾದ ಜಾಗದಲ್ಲಿ ಮಾಡಿರುತ್ತೇನೆ. ಆ ಸಮಯದಲ್ಲಿ ನಾನು, ಚಾಸಾ 1 ಮತ್ತು ಚಾಸಾ 2 ರವರು ಇದ್ದೆವು. ಆ ಸಮಯದಲ್ಲಿ ಪೋಲಿಸರು ಭಾವಚಿತ್ರವನ್ನು ತೆಗೆದಿರುತ್ತಾರೆ. ಸದರಿ ಪಂಚನಾಮೆಯನ್ನು 10.30 ಗಂಟೆಯಿಂದ 11.30 ಗಂಟೆಯವರೆಗೆ ಮಾಡಿರುತ್ತಾರೆ. ಪಂಚನಾಮೆಯನ್ನು ಓದಿ ಸಹಿ ಮಾಡಿರುತ್ತೇನೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ಪಂಚನಾಮೆಯನ್ನು ದಿನಾಂಕ 07-06-2022 ರಂದು ಮಧ್ಯಾಹ್ನ 1.00 ರಿಂದ 2.30 ರವರೆಗೆ ಮಾಡಿದರು ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ1,2 ಮತ್ತು 4 ಪರ ಶ್ರೀ ಜಿ ವಿ ಕೆ ವಕೀಲರಿಂದ ಸಾ 1 ರವರು

ಚಾಸಾ 1, 2,4 ರಿಂದ 5, 8 ರಿಂದ 10 ರವರು ನಮ್ಮ ಊರಿನವರು. ಚಾಸಾ 1 ರವ ರು ಪೋಲಿಸರು ಬಂದಿದ್ದಾರೆ ಬಾ ಎಂದು ನನ್ನನ್ನು ಕರೆದರು ಎಂದರೆ ಸರಿ. ನೀವು ಬಂದ ಕೂಡಲೇ ನಿಮ್ಮ ಸಹಿ ಪಡೆದರು ಎಂದರೆ ಸರಿಯಲ್ಲ. ಸಾಕ್ಷಿ ಗಾಡಿ ಕಳುವಾಗಿದೆ ಎಂದು ಪಂಚನಾಮೆ ಮಾಡಲು ಬಂದಿದ್ದೆವೆ ನೀವು ಸಹಿ ಮಾಡಿ ಎಂದು ಹೇಳಿದರು ಎನ್ನುತ್ತಾರೆ. ಚಾಸಾ 1 ರವರು ಮೋಟಾರ ಸೈಕಲ್ ನಂಬರ ನನಗೆ ಹೇಳಿಲ್ಲ. ಚಾಸಾ ಚಾಸಾ 1, 2,4 ರಿಂದ 5, 8 ರಿಂದ 10 ರವರು ನಮ್ಮ ಊರಿನವರು ಆಗಿದ್ದರಿಂದ ಅವರ ಪ್ರಕರಣಕ್ಕೆ ಅನುಕೂಲವಾಗಲು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಆರೋಪಿ 3 ರವರ ಪರ ವಕೀಲರು ಆರೋಪಿ 1,2 ಮತ್ತು 4 ರವರ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.